ಗೊತ್ತಿಲ್ಲವಾ, ನಿಮ್ಮ ಮನೆಯ ಗಂಡಸ್ತಿಕೆ? ಹೆಣ್ಣು ಕಂಡಿದ್ದೇ ಮೂಸಿಕೊಂಡು ಹೋಗೋದು...' ಹೀಯಾಳಿಸಿದಳು. 'ನೋಡು... ಇದೇ ಕೊನೇ ಸಲ. ಯಾವೊತ್ತೂ ಆ ಈ ಹುಡುಗೀರ ಬಗ್ಗೆ ತಲೆ ಕೆಡಿಸಿಕೋಬೇಡ... ಇನ್ನು ಐದಾರು ವರ್ಷ ಕಳೆದರೆ ನಿನ್ನ ಮಗಳೇ ನಿನ್ನೆದುರು ಇಂಥದೊಂದು ಸಂದರ್ಭ ತಂದಿಡಬಹುದು... ಯೋಚಿಸು...' ಎಂದು, ಇನ್ನೂ ಪಿಯುಸಿಯಲ್ಲಿರುವ ನಮ್ಮ ಮಗಳು ದಿಶಾಳ ಬಗ್ಗೆ ಎಚ್ಚರಿಸಿದ್ದಲ್ಲದೆ, ಅವಳ ಮದುವೆಯವರೆಗೆ ಕನಸತೊಡಗಿದಳು.

ಯಾಕಾದರೂ ಕುಣಾಲಿಯ ಹೆಸರೆತ್ತಿದೆನೋ ಅನ್ನಿಸಿಹೋಯಿತು.

'ನೋಡು... ಇನ್ನು ಮುಂದಾದರೂ ಗಂಭೀರವಾಗಿ ನಿನ್ನ ವಯಸ್ಸಿಗೆ ತಕ್ಕ ಹಾಗಿರು... ಬಿಹೇವ್ ಗ್ರೇಸ್‌ಫುಲೀ...' ತಿಂಡಿ ಮುಗಿಸಿ ಬೂಟು ಕಟ್ಟುವವರೆಗೂ ಮಾತು ಜರುಗಿಯೇ ಇದ್ದಿತು.

## *(ii)*

ಈ ಹೆಂಡತಿಯ ಮೇಲಾಣೆ, ನನಗೆ, ಇವಳ ಅರ್ಥೈಕೆಯ 'ಗಾಂಭೀರ್ಯ'ವೇನೆಂದು ಗೊತ್ತಿಲ್ಲ. ಅಥವಾ, 'ಹಾಗೆ' ಗಂಭೀರವಾಗಿದ್ದೂ ನನಗೆ ಗೊತ್ತಿಲ್ಲ. ಇಂತಹ 'ಗಾಂಭೀರ್ಯ'ದ ಕಾಗುಣಿತವೇ ಗೊತ್ತಿಲ್ಲದಿರುವಾಗ, ಇದನ್ನು ನನ್ನ ಅನುದಿನದ ಆಗುಹೋಗುಗಳ ವಾಕ್ಯದಲ್ಲಿ ಬಳಸುವುದಾದರೂ ಹೇಗೆ? ಘನ ಗಂಭೀರವಾಗಿ ಬದುಕಿನ ಪಥ್ಯ ಕಟ್ಟುವುದಾದರೂ ಎಂತು?

ಭೂಮಿ, ಹೀಗೆಲ್ಲ ಉಪದೇಶಿಸಿ ಇನ್ನೂ ಒಂದು ವಾರದೊಪ್ಪತ್ತು ಕಳೆದಿರಲಿಲ್ಲ, ನನಗೇ ಗೊತ್ತಿರದೆ ನನ್ನ ಅರ್ಥದ ಗಾಂಭೀರ್ಯವೂ ತಪ್ಪಿಹೋಯಿತು! ಮರಾಠೀ ಹುಡುಗಿ ಆದ್ರಾ ನನ್ನ ಬದುಕಿನಲ್ಲಿ ಇಳಿದು ಅವತರಿಸಿದಳು. ಈ ಅವತಾರವೇನೆಂದು ನಿಜಕ್ಕೂ ಅರಿವಾಗುವ ಮೊದಲೇ, ನನ್ನ ಮನಸ್ಸಿನಲ್ಲೂ ಹೃದಯದಲ್ಲೂ ಉಂಟಾಗಿಬಿಟ್ಟಳು. ನೀರೊಳಗಿಳಿದ ಪೊಟ್ಯಾಷಿಯಮ್ ಪರ್ಮಾಂಗನೇಟಿನ ಹಾಗೆ, ಬರೇ ಒಂದೆರಡು ಹರಳು ಚೆಲ್ಲಿದ್ದಷ್ಟೆ ನನ್ನ ಒಳತಂತುಗಳಲ್ಲೆಲ್ಲ ಕದಡಿ ಕರಗಿದಳು. ಇನ್ನು ನಾನೋ, ನನಗೇ ಗೊತ್ತಿಲ್ಲದೆ ನೇರಿಳೆಯಾಗಿಬಿಟ್ಟೆ. ಪರ್ಮಾಂಗನೇಟಿನ ನೇರಿಳೆ. ಅದೇ ನೇರಿಳೆಯ ಏನೇನೋ ಛಾಯೆ. ಏನೇನೋ ಚಿತ್ತಾರ. ಚಿತ್ರವಿಚಿತ್ರ ವಿನ್ಯಾಸ... ಇಷ್ಟಾದ ಮೇಲೆ ಬೇರೆ ದಾರಿಯಾದರೂ ಏನಿತ್ತು? ಇಪ್ಪತ್ತೂ ಮತ್ತೆರಡು ವರ್ಷಗಳ ಮದುವೆಯಲ್ಲಿದ್ದ ಏಕತಾನದ, ಅಷ್ಟೇ ತದೇಕಚಿತ್ತದ ಲಯವೇ ಕುಂಟತೊಡಗಿತ್ತು!

ಇನ್ನು, ಆದ್ರಾ ಅಂದರೊಂದು ನಕ್ಷತ್ರದ ಹೆಸರಂತೆ. ಮಳೆ ತರುವ ನಕ್ಷತ್ರ... ತಕ್ಕುದಾಗಿ, ನಿಲುಕದ ನಕ್ಷತ್ರವೊಂದು ತಂತಾನೇ ಉರುಟಿ ಕೈಗೆಟುಕಿದ ಹಾಗೆ ನನಗೆ ಒದಗಿಬಂದಳು. ಭರಪೂರ ಪ್ರೀತಿಯ ಮಳೆ ಹುಟ್ಟಿಸಿದಳು... ಆದದ್ದಿಷ್ಟೆ: ಗುರುಗಾಂವ್‌ಲ್ಲಿ ನಡೆಯುತ್ತಿರುವ ನನ್ನ ಪ್ರಾಜೆಕ್ಟೊಂದು ಮುಕ್ತಾಯದ ಹಂತದಲ್ಲಿದೆಯಾಗಿ, ಇತ್ತಿತ್ತಲಾಗಿ, ಎರಡು ವಾರಕ್ಕೊಮ್ಮೆ ನಾನು ದೆಹಲಿಗೆ ಹೋಗುವುದಿದೆ. ಎರಡು ಮೂರು ದಿವಸಗಳ ಭೇಟಿ. ಇದೇ ಪ್ರಾಜೆಕ್ಟಿನಲ್ಲಿ ತೊಡಗಿರುವ ಮುಂಬಯಿಯ ಒಂದು ಕನ್ಸಲ್ಟೆನ್ಸಿಯ ಪರವಾಗಿ ಆದ್ರಾಳೂ ದೆಹಲಿಗೆ ಬರುತ್ತಾಳೆ. ನಾನಿರುವ ಹೋಟೆಲಿನಲ್ಲಿಯೇ ತಂಗುತ್ತಾಳೆ. ಇತ್ತಿತ್ತಲಾಗಿ ಒಡತಂಗುತ್ತೇವೆ ಸಹ! ನಮಗೆ ನಾವೇ ಇದ್ದು ನಲಿಯುತ್ತೇವೆ!

ಇದು ಆಗೀಗಲಿನ ಭೇಟಿಯೆಂದು ಉಂಟಾದ ಪರಿಚಯ. ಪದೇ ಪದೇ ಸಿಕ್ಕು ಸ್ನೇಹ... ಮಾತು ಮತ್ತು ಸಲಿಗೆ... ತಮಾಷೆ ಮತ್ತು ಲಲ್ಲೆ... ಬಲುಕಾಲ ಹೀಗಿದ್ದುಕೊಂಡು ಉಂಟಾದ ಬಳಕೆ, ಅದಾವ ಮುಹೂರ್ತದಲ್ಲಿ ಮೋಹವಾಗಿ ಮಾರ್ಪಟ್ಟಿತೋ, ಯಾರಿಗೆ ಗೊತ್ತು? ಮೋಸವೇ ಮೊದಲಾಗಿಬಿಟ್ಟಿತು!